ನಿ-330 (96)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್, ಇವರ ನಿಯಮ 330 ರಡಿ ಕೋರಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ವಿಷಯ:** ಹೈದ್ರಾಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ನೀಡಿದ ತರುವಾಯ ಆ ಭಾಗದ ಸಮಗ್ರ, ಅಭಿವೃದ್ಧಿಗೆ ಅವಶ್ಯವಿರುವ ಅನುದಾನ ಬಿಡುಗಡೆ ಮತ್ತು ಅನುದಾನದ ಸದ್ಬಳಕೆ, ಶೈಕ್ಷಣಿಕ, ಸಾಮಾಜಿಕ ಮತ್ತು ರಾಜಕೀಯ ಬೆಳವಣಿಗೆಗೆ ಕುರಿತು.

******

**ಉತ್ತರ:-**

ಸಂವಿಧಾನದ ಅನುಚ್ಛೇದ 371(ಜೆ) ರನ್ವಯ ರಾಜ್ಯ ಸರ್ಕಾರವು ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶಾಭಿವೃದ್ಧಿಗಾಗಿ ಸರ್ಕಾರದ ಆದೇಶ ಸಂಖ್ಯೆ: ಡಿಪಿಆರ್ 06 ಪಿಎಲ್ಎಕ್ಸ್ 2012, ದಿನಾಂಕ 6ನೇ ನವೆಂಬರ್, 2013ರ ಆದೇಶದಲ್ಲಿ ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಸ್ಥಾಪಿಸಲಾಗಿದೆ.

ಮಂಡಳಿಯ ಮೈಕ್ರೋ/ಮ್ಯಾಕ್ರೋ ಕ್ರಿಯಾಯೋಜನೆಯನ್ನು ಜಿಲ್ಲಾ ಉಸ್ತುವಾರಿ ಸಮಿತಿ ಮೂಲಕ ಮಾಡಲಾಗುತ್ತಿದ್ದು ಶೇಕಡ 84ರಷ್ಟು ಅನುದಾನಕ್ಕೆ ಸಂಬಂಧಿಸಿರುತ್ತದೆ. ಉಳಿದ ಶೇಕಡ 16ರಷ್ಟು ಅನುದಾನದಲ್ಲಿ ಮಾನ್ಯ ಮುಖ್ಯಮಂತ್ರಿಗಳ ವಿವೇಚನಾ ನಿಧಿ(CMDQ)ಗೆ ಶೇಕಡ 2ರಷ್ಟು, ಸರ್ಕಾರದ ವಿವೇಚನಾ ನಿಧಿ(GDQ)ಗೆ ಶೇಕಡ 5ರಷ್ಟು, ಅಧ್ಯಕ್ಷರ ವಿವೇಚನಾ ನಿಧಿ(CDQ)ಗೆ ಶೇಕಡ 3ರಷ್ಟು, ಪ್ರಾದೇಶಿಕ ನಿಧಿ(RF)ಗೆ ಶೇಕಡ 5ರಷ್ಟು ಮತ್ತು ಮಂಡಳಿಯ ಆಡಳಿತ ವೆಚ್ಚಕ್ಕೆ ಶೇಕಡ 1ರಷ್ಟು ಅನುದಾನ ಹಂಚಿಕೆ ಮಾಡಲಾಗಿದೆ.

ಸರ್ಕಾರ ಪ್ರತಿ ವರ್ಷ ಆಯ್ಯವ್ಯಯದಲ್ಲಿ ಘೋಷಿಸಿದ ಅನುದಾನಕ್ಕೆ ಡಾ:ಡಿ.ಎಂ. ನಂಜುಂಡಪ್ಪ ವರದಿ ಅನುಸಾರ ಸಿ.ಡಿ.ಐ ಸೂಚ್ಯಾಂಕ ಆಧಾರದ ಮೇಲೆ ತಾಲ್ಲೂಕನ್ನು ಒಂದು ಘಟಕ್ಕವನ್ನಾಗಿ ಪರಿಗಣಿಸಿ ಮೈಕ್ರೋ ಯೋಜನೆಯಡಿ ತಾಲ್ಲೂಕವಾರು ಅನುದಾನವನ್ನು ಹಂಚಿಕೆ ಮಾಡಲಾಗಿದೆ ಮತ್ತು ಮ್ಯಾಕ್ರೋ ಯೋಜನೆಯಡಿ ಜಿಲ್ಲಾವಾರು ಅನುದಾನ ಹಂಚಿಕೆ ಮಾಡಲಾಗುತ್ತಿದೆ.

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ 2013-14ರಿಂದ 2021-22ನೇ ಸಾಲಿನ ವರೆಗೆ ರೂ.8878.33 ಕೋಟಿಗಳು ಒದಗಿಸಿದ್ದು, ಈ ಪೈಕಿ ರೂ.6250.99 ಕೋಟಿಗಳು ಬಿಡುಗಡೆಯಾಗಿದ್ದು, ರೂ. 6240.67 ಕೋಟಿಗಳು ವೆಚ್ಚವಾಗಿರುತ್ತದೆ. ಬಿಡುಗಡೆಯಾದ, ವೆಚ್ಚವಾದ ಅನುದಾನದ ವಿವರ ಈ ಕೆಳಕಂಡಂತಿದೆ.

(ರೂ.ಕೋಟಿಗಳಲ್ಲಿ)

| ಕ್ರ. ಸಂ | ವರ್ಷ | ಹಂಚಿಕೆಯಾದ ಅನುದಾನ | ಸರ್ಕಾರದಿಂದ ಮಂಡಳಿಗೆ ಬಿಡುಗಡೆಯಾದ ಅನುದಾನ | ಬಿಡುಗಡೆಗೆ ಬಾಕಿ | ವೆಚ್ಚ (ಆರಂಭಿಕ ಶಿಲ್ಕು ಸೇರಿ) * | ಬಿಡುಗಡೆ ಎದುರಾಗಿ ವೆಚ್ಚ (%) (ಶೇಕಡಾವಾರು ಪ್ರಗತಿ) |
|---|---|---|---|---|---|---|
| 1 | 2013-14 | 153.50 | 78.97 | 74.53 | 26.66 | 34 |
| 2 | 2014-15 | 600.00 | 300.00 | 300.00 | 322.59 | 108 |
| 3 | 2015-16 | 1000.00 | 750.00 | 250.00 | 493.66 | 66 |
| 4 | 2016-17 | 1000.00 | 750.00 | 250.00 | 960.02 | 128 |
| 5 | 2017-18 | 1000.00 | 800.00 | 200.00 | 450.32 | 56 |
| 6 | 2018-19 | 1000.00 | 1000.00 | 0.00 | 1193.53 | 119 |
| 7 | 2019-20 | 1500.00 | 1125.00 | 375.00 | 1246.81 | 111 |
| 8 | 2020-21 | 1131.86 | 1031.86 | 100.00 | 926.43 | 90 |
| 9 | 2021-22 (30.11.2021) | 1492.97 | 415.16 | 1077.81 | 620.65 | 149 |
| | **ಒಟ್ಟು** | **8878.33** | **6250.99** | **2627.3** | **6240.67** | **99%** |

*ಭರಿಸಲಾದ ವೆಚ್ಚವು ಆರಂಭಿಕ ಶಿಲ್ಕನ್ನು ಒಳಗೊಂಡಿರುತ್ತದೆ.

2013-14 ರಿಂದ 2021-22ನೇ ಸಾಲಿನವರೆಗೆ ಮಂಡಳಿಯಿಂದ ಶಿಕ್ಷಣ ವಲಯಕ್ಕೆ ಶೇಕಡ 25 ರಷ್ಟು, ಸಮಾಜಿಕ ವಲಯಕ್ಕೆ ಶೇಕಡ 2.1 ರಷ್ಟು, ರಸ್ತೆ ಮತ್ತು ಸಂಪರ್ಕ ಶೇಕಡ 53 ರಷ್ಟು, ಆರೋಗ್ಯ ವಲಯಕ್ಕೆ ಶೇಕಡ 6.3 ರಷ್ಟು, ನೀರು ಸರಬರಾಜುವಲಯಕ್ಕೆ ಶೇಕಡ 2.9 ರಷ್ಟು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ವಲಯಕ್ಕೆ ಶೇಕಡ 1 ರಷ್ಟು, ನೈರ್ಮಲ್ಯ ವಲಯಕ್ಕೆ ಶೇಕಡ 0.5 ರಷ್ಟು , ನೀರಾವರಿ ವಲಯಕ್ಕೆ ಶೇಕಡ 0.6 ರಷ್ಟು ಮತ್ತು ಇತರೆಗೆ ಶೇಕಡ 8.8 ರಷ್ಟು ಅನುದಾನವನ್ನು ನೀಡಲಾಗಿದೆ.

<u>ಮಂಡಳಿಯಲ್ಲಿ ಕೈಗೊಂಡ ಪ್ರಮುಖ ಕಾಮಗಾರಿಗಳ ವಿವರ:-</u>

| ಕ್ರ. ಸಂ. | ಕಾಮಗಾರಿಗಳ ಹೆಸರು | ಮಂಜೂರಾತಿ ನೀಡಿದ ಮೊತ್ತ (ರೂ. ಕೋಟಿಗಳಲ್ಲಿ) |
|---|---|---|
| 1 | ಕಲ್ಯಾಣ ಕರ್ನಾಟಕ ಪ್ರದೇಶದ 06 ಜಿಲ್ಲೆಗಳಲ್ಲಿ ಕೋವಿಡ್-19 ಸಾಂಕ್ರಾಮಿಕ 1 ನೇ ಮತ್ತು 2ನೇ ಅಲೆಯನ್ನು ತಡೆಗಟ್ಟಲು ಹಾಗೂ ನಿಯಂತ್ರಣಗೊಳಿಸಲು ಅವಶ್ಯಕವಿರುವ ವೈದ್ಯಕೀಯ ಉಪಕರಣಗಳು, ಆಮ್ಲಜನಕ ಸ್ಥಾವರಗಳು ಮತ್ತು ಆಂಬುಲೆನ್ಸ್‌ಗಳ ಪೂರೈಕೆಗಾಗಿ. | 171.33 |
| 2 | ಕಲಬುರಗಿಯ ಜಯದೇವ ಹೃದ್ರೋಗ ಮತ್ತು ಸಂಶೋಧನಾ ಸಂಸ್ಥೆಯ ನಿರ್ಮಾಣ ಕಾಮಗಾರಿ. | 150.00 |
| 3 | ಕಲಬುರಗಿ ವಿಮಾನ ನಿಲ್ದಾಣ ಕಾಮಗಾರಿ. | 58.52 |
| 4 | ಕೊಪ್ಪಳ ಜಿಲ್ಲೆಯ ತಳಕಲ್ ಇಂಜಿನಿಯರಿಂಗ್ ಕಾಲೇಜು ನಿರ್ಮಾಣಕ್ಕಾಗಿ. | 50.00 |
| 5 | 6 ಜಿಲ್ಲೆಗಳ 718 ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಶಿಕ್ಷಣ ಇಲಾಖೆಯ TALP ಯೋಜನೆಯ ಕಾರ್ಯಕ್ರಮದ ಅನುಷ್ಠಾನಕ್ಕಾಗಿ. | 49.47 |

| | | |
|---|---|---|
| 6 | ಬೀದರ ರಿಂಗ್ ರೋಡ್ ನಿರ್ಮಾಣ. | 49.75 |
| 7 | ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಟಾಟಾ Technologies Lab ಮತ್ತು ಕಾರ್ಯಾಗಾರ ವಿವರ. | 48.98 |
| 8 | ರಾಯಚೂರು ಜಿಲ್ಲೆಯ ಯರಮರಸ್ ವಿಮಾನ ನಿಲ್ದಾಣಕ್ಕಾಗಿ ಮೂಲಭೂತ ಸೌಕರ್ಯ ಒದಗಿಸಿರುವ ಕುರಿತು. | 39.56 |
| 9 | ಕಲ್ಯಾಣ ಕರ್ನಾಟಕ ಭಾಗದ ಉದ್ಯೋಗ ಆಕಾಂಕ್ಷಿಗಳು ತರಬೇತಿ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಭಾಗವಹಿಸಲು ಬರುವ ಆಕಾಂಕ್ಷಿಗಳಿಗೆ ತಂಗಲು ಅನುಕೂಲವಾಗುವ ದೃಷ್ಟಿಯಿಂದ ಬೆಂಗಳೂರಿನ ಹೆಚ್.ಎಸ್.ಹೆರ್ ಬಡಾವಣೆಯಲ್ಲಿ ಹಾಸ್ಟೇಲ್ ಹಾಗೂ ಆಡಳಿತ ಕಛೇರಿ ಕಟ್ಟಡ ನಿರ್ಮಾಣ. | 33.45 |
| 10 | ಕಲಬುರಗಿ ನಗರದ ಸೇಡಂ ರಿಂಗ್ ರಸ್ತೆಯಲ್ಲಿ ಫ್ಲೈಓವರ ನಿರ್ಮಾಣ ಕಾಮಗಾರಿ. | 15.00 |
| 11 | ದೇವದುರ್ಗ ಪಟ್ಟಣದಲ್ಲಿ ನೂತನ ಇಂಜಿನೀಯರಿಂಗ್ ಕಾಲೇಜು ಕಟ್ಟಡ ನಿರ್ಮಾಣ. | 25.59 |
| 12 | ಶಾಲಾ ಪೂರ್ವ ಶಿಕ್ಷಣ ಬಲವರ್ಧನೆ ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತರು ಹಾಗೂ ಸಹಾಯಕರಿಗೆ ತರಬೇತಿ ಕಾರ್ಯಕ್ರಮ. | 22.80 |
| 13 | ಕಲಬುರಗಿ ನಗರದ ಕಣ್ಣಿ ಮಾರುಕಟ್ಟೆಯಲ್ಲಿ ತರಕಾರಿ ಮಾರುಕಟ್ಟೆ ಹಾಗೂ ಕೋಲ್ಡ್ ಸ್ಟೋರೇಜ್ ನಿರ್ಮಾಣ. | 20.00 |
| 14 | ಯಾದಗಿರಿ ಜಿಲ್ಲೆಯ ಕಡೇಚೂರ ಕೈಗಾರಿಕಾ ಅಭಿವೃದ್ಧಿ ಕಾಮಗಾರಿ. | 10.00 |
| 15 | ಔರಾದ ತಾಲೂಕಿನಲ್ಲಿ ಈಗಾಗಲೇ ಹಂಗರಗಾ ಮತ್ತು ಸಾವರಗಾಂವ ಗ್ರಾಮದ ಮಧ್ಯದಲ್ಲಿ ನಿರ್ಮಿಸಲಾದ ಸೇತುವೆ ಮೇಲ್ಭಾಗದಲ್ಲಿ ಹೊಸದಾಗಿ ಬ್ರಿಡ್ಜ್-ಕಂ-ಬ್ಯಾರೇಜ್ ಕಾಮಗಾರಿ ನಿರ್ಮಿಸುವ ಕಾಮಗಾರಿ. | 10.00 |
| 16 | ಕಲಬುರಗಿ ವಿಭಾಗದ "ನಲಿ-ಕಲಿ" ಕಾರ್ಯಕ್ರಮವನ್ನು ಬಲವರ್ಧನೆಗೊಳಿಸಲು ವಿಭಾಗದ ಎಲ್ಲಾ ನಲಿ-ಕಲಿ ಕೇಂದ್ರಗಳಿಗೆ ಗ್ರೀನ್ ಬೋರ್ಡ್ ಒದಗಿಸುವುದು. | 9.15 |
| 17 | Establishment of Centre of Excellence in Hyderabad Karnataka region. | 9.00 |
| 18 | ಸ್ಮಾರ್ಟ್ ಪೋಲಿಸ್ ಅಡಿಯಲ್ಲಿ ಪೋಲಿಸ್ ಭದ್ರತಾ ಸುಧಾರಣೆಗಾಗಿ ಸಾಮಗ್ರಿ ಸಲಕರಣೆಗಳನ್ನು ಪೂರೈಸಲಾಗಿದೆ . | 8.62 |
| 19 | ರಾಯಚೂರು ಜಿಲ್ಲೆಯ IIIT ಗೆ ಸಂಬಂಧಿಸಿದ ಕಾಮಗಾರಿಗಳು. | 7.46 |
| 20 | ಕಾಳಗಿಯಲ್ಲಿ ನೂತನ ಬಸ ನಿಲ್ದಾಣ ನಿರ್ಮಾಣ ಕಾಮಗಾರಿ. | 6.69 |
| 21 | ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ವಿಜ್ಞಾನ ಇಲಾಖೆಯ ಸಹಯೋಗದಲ್ಲಿ ಶಾಲಾ ಅಂಗಳದಲ್ಲಿ ಸಂಚಾರಿ ತಾರಾಲಯ. | 6.00 |
| 22 | 4387 ಹಿರಿಯ ಪ್ರಾಥಮಿಕ ಶಾಲೆ ಮತ್ತು 1130 ಪ್ರೌಢ ಶಾಳೆಗಳಿಗೆ ವಿಜ್ಞಾನ ಮತ್ತು ಗಣಿಯ ಕಿಟ್ ಒದಗಿಸುವುದು. | 5.29 |
| 23 | ರಾಯಚೂರು ನಗರದ ಮಹಾತ್ಮಾಗಾಂಧಿ ಕ್ರೀಡಾಂಗಣಕ್ಕೆ ಮೂಲಭೂತ ಸೌಕರ್ಯ ಒದಗಿಸುರುವ ಕುರಿತು. | 5.22 |
| 24 | ಯಾದಗಿರಿ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ 400 ಮೀಟರ್ ರನ್ನಿಂಗ್ ಟ್ರ್ಯಾಕ್,ಡ್ರೇನ್ ಗ್ಯಾಲರಿ , ಟೇಬಲ್ ಟೆನ್ನಿಸ್ ಹಾಲ್ ನಿರ್ಮಾಣ ಕಾಮಗಾರಿ. | 5.15 |
| 25 | ಬೀದರ ಜಿಲ್ಲೆಯ ಬೀದರ ವಿಮಾನ ನಿಲ್ದಾಣಕ್ಕೆ(ಟರ್ಮಿನಲ್) ಹಾಗೂ ಅಗತ್ಯವಿರುವ ಮೂಲಭೂತ ಸೌಕರ್ಯಗಳ ಕಾಮಗಾರಿ. | 5.00 |
| 26 | ಬೀದರ ನೆಹರು ಸ್ಟೇಡಿಯಂದಲ್ಲಿ ಕ್ರೀಡಾ ಮೂಲಭೂತ ಸೌಕರ್ಯಗಳಿಗೆ. | 5.00 |
| 27 | ಕಲ್ಯಾಣ ಕರ್ನಾಟಕ ಹಾಗೂ ರಾಜ್ಯದ ಉತ್ತರ ಭಾಗದಿಂದ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ವಿದ್ಯಾರ್ಥಿಗಳು ಉದ್ಯೋಗ, ತರಬೇತಿ, ಸಂದರ್ಶನ ಇತ್ಯಾದಿ ಕೆಲಸಗಳಿಗಾಗಿ ಕಲ್ಯಾಣ ಕರ್ನಾಟಕ ಪ್ರದೇಶದಿಂದ ಬೆಂಗಳೂರಿಗೆ ಬರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಸತಿ ಸೌಕರ್ಯ ಕಲ್ಪಿಸಲು ನಿವೇಶನ ಖರೀದಿ ಮಾಡಿರುವ ವೆಚ್ಚ. | 4.96 |
| 28 | ಜೇವರ್ಗಿ ತಾಲ್ಲೂಕಿನ ಸೊನ್ನದರಿ ಮತ್ತು ಕಟ್ಟಸಂಗಾವಿ ಮಧ್ಯದಲ್ಲಿ ಭೀಮಾನದಿಗೆ ಕುಡಿಯುವ ನೀರಿನ ವೆಂಟೆಡ್ ಡ್ಯಾಂ ಕಾಮಗಾರಿ. | 4.50 |
| 29 | ಕಲಬುರಗಿಯಲ್ಲಿ ಕರ್ನಾಟಕ ಉಚ್ಚನ್ಯಾಯಾಲಯದ ಪೀಠದ ಆವರಣದಲ್ಲಿ ವಿವಿಧ ಕಾಮಗಾರಿಗಳಿಗಾಗಿ. | 4.37 |
| 30 | ಶೈಕ್ಷಣಿಕ ಹಿಂದುಳಿದಿರುವ ಹೈ.ಕ.ಪ್ರದೇಶದಲ್ಲಿನ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳನ್ನು | 4.35 |

| | | |
|---|---|---|
| | ಉನ್ನತ ಶಿಕ್ಷಣದಲ್ಲಿ ಭಾಗವಹಿಸಲು ಉತ್ತೇಜಿಸಲು ಟೆಲಿ-ಶಿಕ್ಷಣವನ್ನು ಕ.ಕ.ಪ್ರದೇಶದ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಅನುಷ್ಠಾನಗೊಳಿಸುವ ಕುರಿತು. | |
| 31 | ಸುರಪುರ ವಿಧಾನಸಭಾ ಕ್ಷೇತ್ರದಲ್ಲಿ ಕೌಶಲ್ಯ ತರಬೇತಿ, ಬ್ಯಾಂಕ್ ತರಬೇತಿ, ಎಲ್.ಐ.ಸಿ ತರಬೇತಿ, ರೈಲ್ವೆ ಪರೀಕ್ಷಾ ತರಬೇತಿ, ಮಹಿಳೆಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ತರಬೇತಿ ಮತ್ತು ವಾಹನ ತರಬೇತಿ ಹಾಗೂ ಪರವಾನಿಗೆ ಪತ್ರ ಅರ್ಹ ಅಭ್ಯರ್ಥಿಗಳಿಗೆ ಸಮಗ್ರ ತರಬೇತಿ ಒದಗಿಸುವುದು. | 4.09 |
| 32 | ಕಲ್ಯಾಣ ಕರ್ನಾಟಕ ವಿಭಾಗದಲ್ಲಿ 2021-22 ನೇ ಶೈಕ್ಷಣಿಕ ಸಾಲಿನಲ್ಲಿ ಶಿಕ್ಷಕರ ಅರ್ಹತಾ ಪರೀಕ್ಷೆಯ (ಟಿ.ಇ.ಟಿ) & (ಸಿ.ಇ.ಟಿ) ತರಬೇತಿ. | 2.10 |
| 33 | ಪೋಲಿಸ್ ಇಲಾಖೆಗೆ Emergency Response Support System-11 (ERSS-11) 24X7 ಕಾಲ ಸಾರ್ವಜನಿಕ ತುರ್ತು ಸೇವೆಗಾಗಿ 05 ವಾಹನಗಳು ನೀಡಲಾಗಿದೆ. | 1.00 |
| 34 | Karnataka Multi Sectoral Nutrition Pilot Project ಕಾರ್ಯಕ್ರಮವನ್ನು ಚಿಂಚೋಳಿ ಮತ್ತು ದೇವದುರ್ಗ ಬ್ಲಾಕಗಳಲ್ಲಿ ಅನುಷ್ಠಾನಗೊಳಿಸುವ ಕುರಿತು. | 2.27 |
| 35 | Afforestation-Establishment of Seedwomb technology in UAS Raichur | 2.10 |

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಶಿಕ್ಷಣ, ಆರೋಗ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ವಲಯಗಳು ಮತ್ತು ಕೈಗಾರಿಕೆ, ಕೌಶಲ್ಯಾಭಿವೃದ್ಧಿ, ನೀರಾವರಿ, ಕುಡಿಯುವ ನೀರು, ರಸ್ತೆ ಮತ್ತು ಸಂಪರ್ಕ, ಅಂತರ್ಜಲ ಸಂರಕ್ಷಣೆ ಹಾಗೂ ಕೃಷಿ ಹಾಗೂ ಕೃಷಿಗೆ ಸಂಬಂಧಿತ ವಲಯಗಳಲ್ಲಿ ಅಭಿವೃದ್ಧಿ ಅಂತರಗಳನ್ನು ಗುರುತಿಸಿ, ಆದ್ಯತೆಗನುಗುಣವಾಗಿ ಯೋಜನೆಗಳನ್ನು ರೂಪಿಸಿ, ಕಲ್ಯಾಣ ಕರ್ನಾಟಕ ಪ್ರದೇಶವನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ.

**ಸಂಖ್ಯೆ: ಪಿಡಿಎಸ್ 145 ಹೆಚ್‌ಕೆಡಿ 2021**

(ಮುನಿರತ್ನ)
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಇಲಾಖೆಯ ಸಚಿವರು